ಟಿ.ಕೆ. ರವೀಂದ್ರನ್ | ಕೋಡಿಬೆಟ್ಟು ರಾಜಲಕ್ಷ್ಮಿ

# ಜಾಗೃತಿ, ಸ್ವಪ್ನ, ಸುಷುಪ್ತಿಯಲ್ಲಿ ಕಥಕಳಿ



## ಪಚ್ಚವೇಷ ದೊರೆ ಕಲಾಮಂಡಲಂ ಗೋಪಿ ಆಶಾನ್ ಸಂದರ್ಶನ

ಮಲಯಾಳದಲ್ಲಿ ಕಥ ಅಂದ್ರೆ ಕಥೆ, ಕಳಿ ಅಂದ್ರೆ ಆಟ. ಕಥೆಯ ಆಟವೇ ಕಥಕಳಿ. ರಾತ್ರಿಪೂರ ನಡೆಯುವ ಕಥಕಳಿ ಪ್ರದರ್ಶನವು ನೃತ್ಯನಾಟಕದಂತೆ ತೋರುವ, ಮುದ್ರಾಪ್ರಧಾನವಾದ ವೈಭವಯುತ ಕಲಾಪ್ರಕಾರ. ಕೇರಳ ಅದರ ತವರೂರು. ಬಣ್ಣಗಳ ಸಂಯೋಜನೆ, ಸಂಸ್ಕೃತ ಮತ್ತು ಮಣಿಪ್ರವಾಳ ಕಾವ್ಯದ ಹಿಮ್ಮೇಳ ಮತ್ತು ತನ್ನ ಅಗಾಧತೆಯ ದೆಸೆಯಿಂದಾಗಿ ಇದು ಯಾರನ್ನೇ ಆದರೂ ಸೂಜಿಗಲ್ಲಿನಂತೆ ಸೆಳೆದುಬಿಡುತ್ತದೆ. ಆದರೆ ಕಥಕಳಿ ಪ್ರದರ್ಶನವನ್ನು ಆನಂದಿಸಲು ಮನಸ್ಸು ತರಬೇತುಗೊಂಡಿರಬೇಕು. ಹಾಗಾಗಿ ಮೇಲ್ಜಾತಿಗಳ ವ್ಯಾಪ್ತಿಯಲ್ಲಿಯೇ ಇದು ಹೆಚ್ಚು ಅಸ್ತಿತ್ವ ಪಡೆದಿತ್ತು. ಶಿಕ್ಷಣವು ಸರ್ವವ್ಯಾಪಿಯಾದಂತೆ ಕಥಕಳಿ ಜಾತಿ ಗೋಡೆಯೊಡೆದು ಹೊರಬಂದಿದೆ. ಯೂರೋಪಿಯನ್ ಮತ್ತು ಗ್ರೀಕ್‌ನ ಕ್ಲಾಸಿಕಲ್ ಎಂದು ಗುರುತಿಸಿಕೊಂಡ ಕಥೆಗಳನ್ನು ಕಥಕಳಿಗೆ ಅಳವಡಿಸುವ ಪ್ರಯತ್ನಗಳು ನಡೆದಿವೆ. ಇದರ ಅನನ್ಯತೆಯನ್ನು ಗುರುತಿಸಿದ ಹೊಸತಲೆಮಾರಿನ ಯುವ ತಲೆಮಾರು ಅನೇಕ ಪ್ರಯೋಗಗಳಲ್ಲಿ ತೊಡಗಿದೆ.